ಅಂತ ಅವರಿಗೇ ದಬಾಯಿಸಿದ್ರಂತೆ. ಸೈಟಿನ ಓನರನ್ನು ಹುಡುಕಿ ಒಂದ್ಮಾತು ಕೇಳೋದು ಧರ್ಮ ಅಲ್ವಾ? ಎಂಥ ಕೆಟ್ಟ ಜನರಿರಬೇಕು. ಕೇಳೋ ಅಗತ್ಯವೇ ಇಲ್ಲ ಅನ್ನೋ ರೀತಿ ನೋಡಿದ್ರೆ ಅವರ ಉದ್ದೇಶಗಳ ಬಗ್ಗೆ ಸಂದೇಹ ಆಗ್ತಿದೆ. ಸುತ್ತ-ಮುತ್ತಲ ಎಲ್ಲ ಮನೆಯವರ ಹತ್ರ ಈಗಾಗ್ಲೆ ಜಗಳಾಡಿಕೊಂಡಿದಾರಂತೆ. ಸಿಕ್ಕಾಪಟ್ಟೆ ಅಹಂಕಾರ ಮತ್ತು ಜೋರು ಅಂದ್ರು ಅಕ್ಕ. ನಮ್ಮ ಸೈಟಿನ ಸುತ್ತ ಒಂದು ಕಾಂಪೌಂಡ್ ಅಂತ ಹಾಕ್ಸಿದ್ರೆ ಒಳ್ಳೇದಲ್ವಾ? ಬೇಕಾದ್ರೆ ಒಂದ್ವಾರ ರಜಾ ತಗೋತೀನಿ'' ಅಂದ ಮೂರ್ತಿ.

ಗೀತಾ ಧಾರವಾಹಿಯ ಕಡೆ ನೋಡ್ಕೊಂಡೆ, 'ಹಾಕ್ಕೊಳ್ಳಿ' ಅಂದಳು. ತನ್ನ ಹೆಂಡತಿಯ ಮುಖದಲ್ಲಿ ಆಶ್ಚರ್ಯ ಅಥವಾ ದುಗುಡ ಎರಡೂ ಇಲ್ಲದ್ದನ್ನು ನೋಡಿ ಅವನಿಗೆ ಕಸಿವಿಸಿಯಾಯ್ತು. ಆದರೆ, ಅವನ ಸಮಸ್ಯೆಗಳು ಗೀತಾಳಿಗೆ ಸಮಸ್ಯೆಗಳು ಅಂತಲೇ ಅನ್ನಿಸುತ್ತಿರಲಿಲ್ಲ ಎನ್ನುವುದೂ ಮೂರ್ತಿಗೆ ಗೊತ್ತಿತ್ತು.

2

'ಹುಡುಗಿ ಜೋರು ಕಣೋ' ಎಂದು ಗೆಳೆಯ ರಮೇಶ ಮದುವೆಗೂ ಮುನ್ನ ಎಚ್ಚರಿಸಿದ್ದ. ಅದು ಮೂರ್ತಿಗೆ ಧನಾತ್ಮಕವಾಗಿಯೇ ಕೇಳಿಸಿತ್ತು. ಚಿಕ್ಕಂದಿನಿಂದ ಯಾರಾದರೂ ಜೋರಾಗಿ ಮಾತಾಡಿದರೆ ಮೂರ್ತಿಯ ಕೈ ಕಾಲುಗಳು ನಡುಗುತ್ತಿದ್ದವು. ಬಾಯಿ ಒಣಗುತ್ತಿತ್ತು. ಪದಗಳು ಮರೆತುಹೋಗಿ ತೊದಲುತ್ತಿದ್ದ. ಅವರಿವರ ಮೇಲೆ ಜೋರು ಮಾಡಬೇಕೆಂಬ ಆಸೆ ಬಂದರೂ ಅವನಿಗದು ಸಾಧ್ಯವಾಗುತ್ತಿರಲಿಲ್ಲ. ತನ್ನ ಗೆಳೆಯರಲ್ಲಿ ಯಾರಾದರೂ ಜೋರಿನ ಸ್ವಭಾವದವರಿದ್ದರೆ ಅವರ ಸೈಡ್ ಕಿಕ್ಕಿನಂತೆ ಓಡಾಡಿಕೊಂಡಿದ್ದ ಮೂರ್ತಿಗೆ ತನ್ನ ದೌರ್ಬಲ್ಯದ ಮೇಲೆ ಬಹಳ ಅಸಮಾಧಾನವಿತ್ತು.

ಅದಕ್ಕೆ ಸರಿಯಾಗಿ ವಾರಗೆಯ ಹುಡುಗರ ಧ್ವನಿ ಒಡೆದು ಅವರಿಗೆ ತೆಳ್ಳಗೆ ಗಡ್ಡ-ಮೀಸೆ ಬಂದು, ಕರ್ಣಗೆ ಬಲಿಯುತ್ತಿದ್ದರೂ ಮೂರ್ತಿಯ ಧ್ವನಿ ಒಡೆದಿರಲಿಲ್ಲ. ವರ್ಷಗಳಾದರೂ ಗದ್ದದಲ್ಲಿ ಒಂದೆರಡು ಕೂದಲ ಹೊರತು ಏನೂ ಬೆಳೆದಿರಲಿಲ್ಲ. ಹೌಹಾರಿ ಹೋಗಿದ್ದ ಮೂರ್ತಿ ಸ್ಪೀಚ್ ಅಂಡ್ ಲ್ಯಾಂಗ್ವೇಜ್ ಥೆರಪಿಸ್ಟನ್ನು ಹುಡುಕಿಕೊಂಡು ಹೋಗಿದ್ದ. ಅವನನ್ನು ಪರೀಕ್ಷಿಸಿದ್ದ ಅವರು ಆತಂಕ ಪಡದಿರುವಂತೆ ಹೇಳಿ ಅದೆಲ್ಲ ಹಾರ್ಮೋನುಗಳ ಪ್ರಭಾವವೋ-ಅಭಾವವೋ ಅಂತ ಹೇಳಿದಾಗ ಅವನು ತತ್ತರಿಸಿದ್ದ. 'ಒಂದು ಮದುವೆ ಅಂತಾದರೆ ನಂತರ ಎಲ್ಲ ಸರಿಹೋಗುತ್ತದೆ' ಎಂದು ಹೇಳಿ ಅವರು ನಕ್ಕಿದ್ದರು. ಮೂರ್ತಿಗೆ ಕಸಿವಿಸಿಯಾಗಿತ್ತು. ಒಳಗೊಳಗೇ ತನಗೆ 'ಮಕ್ಕಳನ್ನು ಹುಟ್ಟಿಸುವ ಶಕ್ತಿ ಇಲ್ಲವೇನೋ' ಎಂದು ಅವನು ಹೆದರಿಕೊಂಡಿದ್ದ ದಿನಗಳೂ ಇದ್ದವು.

ನಿಧಾನವಾಗಿ ಮೂರ್ತಿಯ ಧ್ವನಿ ಅರೆ-ಬರೆ ಒಡೆಯಿತಾದರೂ ಮಾತಾಡುವಾಗ ನಡುವೆ ಕಿರ್ರನೆ... ಕೀರಲು ಧ್ವನಿ ಬಂದುಬಿಡುತ್ತಿತ್ತು. ಅಪಾರ ಸಿಟ್ಟು ಬಂದರೂ ಅದನ್ನು ಹೊರಹಾಕಲಾಗದ ಮೂರ್ತಿ ಅದನ್ನು ಮುಚ್ಚಲೋ ಎಂಬಂತೆ ದುರ್ಬಲವಾದ ಜೋಕುಗಳನ್ನು ಹೇಳಿಕೊಂಡು ಹೆ... ಹೆ... ಹೆ... ಎಂದು ಲಘುವಾಗಿ ಓಡಾಡಿಕೊಂಡಿದ್ದ. ಮೈ ಕಡ್ಡಿಯಂತಿದ್ದರೂ ನಿಗರಾಡುತ್ತಿದ್ದ ಅವನ ಸ್ನೇಹಿತರೆಲ್ಲ ಅವನಿಗೆ ಹೀರೋಗಳಂತೆ ಕಂಡಿದ್ದರು.

'ಹಿಂದೆ ಹೈಸ್ಕೂಲಿನಲ್ಲಿ ನನ್ನ ಕ್ಲಾಸ್-ಮೇಟ್ ಆಗಿದ್ದಳು ಕಣೋ... ಮುಖ ಮೂತಿ ನೋಡದೆ ಜಾಡಿಸಿಬಿಡೋಳು' ಅಂತ ರಮೇಶ ಹೇಳಿದಾಗ ಮೂರ್ತಿಗೆ ಏನೋ ಖುಷಿಯಾಗಿತ್ತು. ಗುಂಡಗೆ ಮುದ್ದಾಗಿದ್ದ ಗೀತಾಳನ್ನು ಕೆಣಕಿ ತನ್ನ ಗೆಳೆಯ ರಮೇಶ ಉಗಿಸಿಕೊಂಡಿರಬೇಕು ಅನ್ನಿಸಿ ಆ ಹುಡುಗಿಯ ಬಗ್ಗೆ ಹೆಮ್ಮೆಯೆನಿಸಿತ್ತು. ಅವರಿವರ ಮೇಲೆ ಧ್ವನಿ ಏರಿಸಲಾಗದೆ ಪೇಚಾಡುತ್ತಿದ್ದ ಮೂರ್ತಿಗೆ ಜೋರು ಸ್ವಭಾವದ ಹುಡುಗಿ ಎಂದ ಕೂಡಲೆ ಅವಳೇ ತನಗೆ ಸರಿಯಾದ ಜೋಡಿಯೆನಿಸಿಬಿಟ್ಟಿತ್ತು.

ಅವರ ಮದುವೆಯಾಗಿ ಇಪ್ಪತ್ತು ಮೂರು ವರ್ಷಗಳು ಕಳೆದಿದ್ದವು. ಆರಕ್ಕೇರದ - ಮೂರಕ್ಕಿಳಿಯದ ಬದುಕಿನಲ್ಲಿ ಅವರಿಬ್ಬರ ನಡುವೆ ಅಂತದ್ದೇನೂ ಜಗಳಗಳು ನಡೆದಿರಲಿಲ್ಲ. ಗೀತಾ ಇದ್ದದ್ದೆ ಹಾಗೆ, ಆಳವಾದ ಶಾಂತ ಕಡಲಿನಂತೆ. ಆದರೆ, ಉಕ್ಕಿದರೆ ಮಾತ್ರ ಸೊಕ್ಕಿದ ಸುನಾಮಿಯಂತೆ ಅಂತ ಅವನಿಗೆ ನಿಧಾನವಾಗಿ ಅರ್ಥವಾಗಿತ್ತು.

ಇದ್ದ ಒಬ್ಬಳೆ ಮಗಳನ್ನು ಬೆಂಗಳೂರಿನ ಪಿ.ಜಿ. ಯೊಂದರಲ್ಲಿ ಬಿಟ್ಟು ಓದಿಸುತ್ತಿದ್ದರು. ಮದುವೆ-ಸಂಸಾರ-ಮಗಳು ಎಂದಾದ ನಂತರ ಮೂರ್ತಿಯೂ ಸಮಾಜದಲ್ಲಿ ಒಬ್ಬ ಸಂಸಾರಸ್ಥನಾಗಿ ಸಮಾಧಾನಕ್ಕೆ ಬಂದಿದ್ದ. ಅದಕ್ಕೆಲ್ಲ ತನ್ನ ಹೆಂಡತಿ ಗೀತಾಳೇ ಕಾರಣ